**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ತೇಜಸ್ವಿನಿಗೌಡ ಇವರು ನಿಯಮ 330 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.**

**ಸೂಚನೆ:**

ರಾಜ್ಯದಲ್ಲಿ ಅರಣ್ಯಶಾಸ್ತ್ರ ಪದವಿಯನ್ನು ಪಡೆದಿರುವ ವಿದ್ಯಾರ್ಥಿಗಳು ಅರಣ್ಯ ಇಲಾಖೆಯ ವಿವಿಧ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಬೇಕಾಗುವಂತಹ ಎಲ್ಲಾ ವಿದ್ಯಾರ್ಹತೆ ವಿಷಯಗಳಿಗೆ ಸಂಬಂಧಿಸಿದಂತೆ ಸದರಿಯವರ ಪಠ್ಯಪುಸ್ತಕದಲ್ಲಿ ಅಳವಡಿಸಿ ಪದವಿಯನ್ನು ಪಡೆದಿರುತ್ತಾರೆ. ದೇಶದ ವಿವಿಧ ರಾಜ್ಯಗಳಲ್ಲಿ ಅರಣ್ಯಾಧಿಕಾರಿಗಳ ಹುದ್ದೆಗಳ ನೇಮಕಾತಿಗೆ ಬಿಎಸ್‌ಸಿ (ಅರಣ್ಯಶಾಸ್ತ್ರ) ವಿದ್ಯಾರ್ಹತೆಯನ್ನು ಮಾನದಂಡವಾಗಿ ಪರಿಗಣಿಸಿರುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ವ್ಯತಿರಿಕ್ತವಾಗಿ ಕೃಷಿ ಹಾಗು ವಿಜ್ಞಾನ ವಿಭಾಗದ ಇತರೆ ಪದವಿಗಳನ್ನು ಪರಿಗಣಿಸುವ ಮೂಲಕ ಅರಣ್ಯ ರಕ್ಷಣೆ ನಿರ್ವಹಣೆ, ಕಾನೂನು ಹಾಗೂ ಜೀವ ವೈವಿಧ್ಯಗಳ ಆರೋಗ್ಯ ರಕ್ಷಣೆ ಕುರಿತು ಇತ್ಯಾದಿ ಸಾಮಾಜಿಕ ಹಾಗೂ ಇಂಜಿನಿಯರಿಂಗ್ ವಿಷಯಗಳ ಪರಿಣಿತಿ ಹೊಂದಿರುವ ಬಿ.ಎಸ್‌ಸಿ ಅರಣ್ಯ ಶಾಸ್ತ್ರ ವಿದ್ಯಾರ್ಥಿಗಳಿಗೆ ದಿನಾಂಕ:28.02.2022ರಂದು ಹೊರಡಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ/72/ಎಫ್‌ಇಜಿ/2017 ರ ಮಾರಕವಾಗಿದೆ. ಇತರೆ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ಅವರವರದ್ದೇ ಆದ ವೃತ್ತಿಪರ ಪದವಿಯೇ ಕನಿಷ್ಠ ವಿದ್ಯಾರ್ಹತೆಯಾಗಿರುವಂತೆ ಅರಣ್ಯ ಇಲಾಖೆಯ ತಾಂತ್ರಿಕ ಹುದ್ದೆಗಳಾದ ACF, RFO ಮತ್ತು DYRFO ನೇರ ನೇಮಕಾತಿಯಲ್ಲಿ ಬಿ.ಎಸ್ಸಿ ಅರಣ್ಯಶಾಸ್ತ್ರ ಪದವಿಯನ್ನೆ ಕನಿಷ್ಠ ವಿದ್ಯಾರ್ಹತೆಯನ್ನಾಗಿ ಪರಿಗಣಿಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡುವ ಬಗ್ಗೆ.

**ಉತ್ತರ:**

1. ಕಳೆದ 150 ವರ್ಷಗಳಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ/ಅಧಿಕಾರಿಗಳು ನಿರ್ವಹಿಸುವ ಜವಾಬ್ದಾರಿಗಳಲ್ಲಿ ವಿವಿಧ ಇತರೆ ವಿಷಯಗಳು, ಉದಾಹರಣೆಗೆ ಪರಿಸರ ಸಂರಕ್ಷಣೆ, ಹವಮಾನ ಬದಲಾವಣೆಗಳಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳನ್ನು ಆಧುನಿಕ ತಂತ್ರಜ್ಞಾನಗಳನ್ನು ಉಪಯೋಗಿಸುವುದರ ಮೂಲಕ ನಿವಾರಿಸುವ ಜವಾಬ್ದಾರಿಗಳನ್ನೂ ಸಹ ಕ್ರಮವಾಗಿ ಅಳವಡಿಸಿಕೊಳ್ಳಲಾಗುತ್ತಿದೆ.

2. ಈ ರೀತಿ ಸಮಯದ ಅವಶ್ಯಕತೆಗೆ ಅನುಗುಣವಾಗಿ ಅರಣ್ಯ ಇಲಾಖೆಯ ಸದರಿ ವೃಂದಗಳ ಸಿಬ್ಬಂದಿ/ಅಧಿಕಾರಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕಾಲ ಕಾಲಕ್ಕೆ ಬದಲಾವಣೆ ಮಾಡಲಾಗುತ್ತಿದೆ.

3. ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬದಲಾವಣೆಗಳನ್ನು ಮಾಡುವಾಗ ಸಂವಿಧಾನದ ಅನುಚ್ಛೇಧ 14 ಮತ್ತು 16ಗಳನ್ನು ಗಮನದಲ್ಲಿಟ್ಟುಕೊಂಡು ACF, RFO ಮತ್ತು DyRFO-cum-Surveyor ವೃಂದಗಳ ನೇರ ನೇಮಕಾತಿ ಅರ್ಹತೆಗಳಲ್ಲಿ ದೇಹದಾಡ್ಯ ಸಾಮರ್ಥ್ಯ ಪರೀಕ್ಷೆಗಳು ಅಲ್ಲದೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ತಾಂತ್ರಿಕ ಸಂಸ್ಥೆಗಳಿಂದ ಉತ್ತೀರ್ಣರಾಗುತ್ತಿರುವ ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ಸಮಾನ ಅವಕಾಶಗಳನ್ನು ನೀಡುವ ಮೂಲಕ ವಿವಿಧ ಮುಖ್ಯ ವಾಹಿನಿಯ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ (Physics), ರಸಾಯನಶಾಸ್ತ್ರ



Generated from eOffice by MANOHARA V.G, FEE-SRASST(MVG)_EST, SENIOR ASSISTANT, FOREST DEPARTMENT SEC on 21/03/2024 05:17 PM

(Chemistry), ಗಣಿತ (Mathematics), ಸಸ್ಯಶಾಸ್ತ್ರ (Botany), ಪ್ರಾಣಿಶಾಸ್ತ್ರ (Zoology), ಭೂಗರ್ಭಶಾಸ್ತ್ರ (Geology), ವಿವಿಧ ಇಂಜಿನಿಯರಿಂಗ್/ಟೆಕ್ನಾಲಾಜಿ ವಿಷಯಗಳಾದ ಕೃಷಿ ಇಂಜಿನಿಯರಿಂಗ್ (Agricultural Engineering), ಕೆಮಿಕಲ್ ಇಂಜಿನಿಯರಿಂಗ್ (Chemical Engineering), ಸಿವಿಲ್ ಇಂಜಿನಿಯರಿಂಗ್ (Civil Engineering), ಎಲೆಕ್ಟ್ರಿಕಲ್ ಇಂಜಿನಿಯರಿಂಗ್ (Electrical Engineering), ಮೆಕ್ಯಾನಿಕಲ್ ಇಂಜಿನಿಯರಿಂಗ್ (Mechanical Engineering), ಕಂಪ್ಯೂಟರ್ ಸೈನ್ಸ್ (Computer Science Engineering), ಕಂಪ್ಯೂಟರ್ ಅಪ್ಲಿಕೇಷನ್ಸ್ (Computer Applications) ಅಲ್ಲದೇ, ಕೃಷಿ (Agriculture), ತೋಟಗಾರಿಕೆ (Horticulture), ಪಶು ವೈದ್ಯಕೀಯ (Animal Husbandry and Veterinary Science), ಮೀನುಗಾರಿಕೆ (Fisheries), ವನ್ಯಜೀವಿ (Wildlife), ಪರಿಸರ ವಿಜ್ಞಾನ (Environmental Science) ಹಾಗೂ ಅರಣ್ಯಶಾಸ್ತ್ರ (Forestry) ವಿಷಯಗಳಲ್ಲಿ ಪದವಿಧರರನ್ನು ಅರಣ್ಯ ಇಲಾಖೆಯಲ್ಲಿ ನೇರ ನೇಮಕಾತಿ ಮೂಲಕ ಭರ್ತಿಯಾಗಲು ಅವಕಾಶ ನೀಡಲಾಗುತ್ತಿದೆ.

4. ಅರಣ್ಯ ಇಲಾಖೆಯ ಸಿಬ್ಬಂದಿ/ಅಧಿಕಾರಿಗಳ ವಿವಿಧ ರೀತಿಯ ಜವಾಬ್ದಾರಿಗಳು ಯಾವುದೇ ಒಂದು ಶೈಕ್ಷಣಿಕ ವಿಷಯಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಇದರಿಂದಾಗಿ ಅರಣ್ಯ ಇಲಾಖೆಯಲ್ಲಿ ACF, RFO ಮತ್ತು DyRFO-cum-Surveyor ವೃಂದಗಳ ನೇರ ನೇಮಕಾತಿ ಈ ಹಿಂದಿನಿಂದಲೇ ವಿವಿಧ ಶೈಕ್ಷಣಿಕ ವಿಷಯಗಳಲ್ಲಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಸ್ಪರ್ದಾತ್ಮಕ ಪರೀಕ್ಷೆಯ ಮೂಲಕ ನೇರ ನೇಮಕಾತಿ ಮಾಡುವುದು ವೈಜ್ಞಾನಿಕವಾಗಿರುತ್ತದೆ ಹಾಗೂ ಎಲ್ಲರಿಗೂ ಸಮಾನವಾದ ಅವಕಾಶ ನೀಡುವ ಮೂಲಕ ನ್ಯಾಯ ಸಮ್ಮತವೂ ಆಗಿರುತ್ತದೆ.

5. ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು ಹಾಗೂ ತಾಂತ್ರಿಕ ಸಂಸ್ಥೆಗಳಿಂದ ವಿಜ್ಞಾನ, ಇಂಜಿನಿಯರಿಂಗ್, ಕೃಷಿ, ತೋಟಗಾರಿಕೆ, ಪಶು ವೈದ್ಯಕೀಯ, ಮೀನುಗಾರಿಕೆ ವಿಷಯಗಳಲ್ಲಿ ಉತ್ತೀರ್ಣರಾಗುತ್ತಿರುವ ಪದವೀಧರರ ಸಂಖ್ಯೆಯು ಅರಣ್ಯ ಶಾಸ್ತ್ರ (Forestry) ಪದವೀಧರರ ಸಂಖ್ಯೆಗಿಂತ ತೀರ ಹೆಚ್ಚಿಗೆ ಇದ್ದರೂ ಸಹ, ಕಳೆದ ಕೆಲವು ವರ್ಷಗಳಿಂದ ಮಾತ್ರ ನೇರ ನೇಮಕಾತಿ ಅಧಿಸೂಚನೆಯಲ್ಲಿ ಒಟ್ಟು ಖಾಲಿ ಹುದ್ದೆಗಳ ಪೈಕಿ ಅರಣ್ಯ ಶಾಸ್ತ್ರ (Forestry) ಪದವೀಧರರಿಗೆ ಈಗಾಗಲೇ 50% ಮೀಸಲಾತಿಯನ್ನು ಪ್ರತ್ಯೇಕವಾಗಿ ನೀಡಲಾಗುತ್ತಿರುತ್ತದೆ.

6. ಒಂದು ವೇಳೆ ಅರಣ್ಯ ಇಲಾಖೆಯ ACF, RFO ಮತ್ತು DyRFO-cum-Surveyor ವೃಂದಗಳ ನೇರ ನೇಮಕಾತಿಯಲ್ಲಿ ಎಲ್ಲಾ ಹುದ್ದೆಗಳನ್ನು ಅರಣ್ಯ ಶಾಸ್ತ್ರ (Forestry) ಪದವೀಧರರಿಗೆ ಮಾತ್ರ ಮೀಸಲಾತಿಯನ್ನು ಕಲ್ಪಿಸಿದಲ್ಲಿ, ರಾಜ್ಯದ ಉಳಿದ ಪದವೀಧರ ಅಭ್ಯರ್ಥಿಗಳು ಪೂರ್ಣವಾಗಿ ಅವಕಾಶದಿಂದ ವಂಚಿತರಾಗುತ್ತಾರೆ. ಅಲ್ಲದೇ, ಇದು ಭಾರತ ಸಂವಿಧಾನದ ಅನುಚ್ಛೇಧ 14 ಮತ್ತು 16ಗಳ ವಿರುದ್ಧವಾಗುತ್ತದೆ.



Generated from eOffice by MANOHARA V.G, FEE-SRASST(MVG)_EST, SENIOR ASSISTANT, FOREST DEPARTMENT SEC on 21/03/2024 05:17 PM

7. ಭಾರತ ದೇಶದ ಇತರೆ ರಾಜ್ಯಗಳಲ್ಲಿನ ACF ಮತ್ತು RFO ವೃಂದಗಳಲ್ಲಿನ ನೇರ ನೇಮಕಾತಿ ಅಧಿಸೂಚನೆಗಳನ್ನು ಪರಿಶೀಲಿಸಲಾಗಿ, ಈ ಕೆಳಗಿನ ಅಂಶಗಳನ್ನು ಗಮನಿಸಬೇಕಾಗಿದೆ.

| ರಾಜ್ಯ | ಅಧಿಸೂಚಿಸಿದ ವೃಂದ ಮತ್ತು ಹುದ್ದೆಗಳು | ನಿಗಧಿಪಡಿಸಲಾದ ಶೈಕ್ಷಣಿಕ ವಿದ್ಯಾರ್ಹತೆ ವಿಷಯಗಳು |
|---|---|---|
| ತಮಿಳುನಾಡು | 300 Forester ಹುದ್ದೆಗಳಿಗೆ ನೇರ ನೇಮಕಾತಿ ಅಧಿಸೂಚನೆ ದಿನಾಂಕ:06.10.2018 | 16 BSc/Engineering ವಿಷಯಗಳು + ಅರಣ್ಯ ಶಾಸ್ತ್ರ (Forestry) |
| ತಮಿಳುನಾಡು | 09 ACF ಹುದ್ದೆಗಳಿಗೆ ನೇರ ನೇಮಕಾತಿ ಅಧಿಸೂಚನೆ ದಿನಾಂಕ:13.12.2022. | 20 BSc/Engineering ವಿಷಯಗಳು + ಅರಣ್ಯ ಶಾಸ್ತ್ರ (Forestry) |
| ಕೇರಳ | 3 RFO ಹುದ್ದೆಗಳಿಗೆ ನೇರ ನೇಮಕಾತಿ ಅಧಿಸೂಚನೆ ದಿನಾಂಕ:29.09.2023 | Degree from Kerala Agricultural University or an equivalent degree in BSc |
| ತೆಲಂಗಾಣ | RFO ಹುದ್ದೆಗಳಿಗೆ ನೇರ ನೇಮಕಾತಿ | 14 ವಿಷಯಗಳು |
| ಆಂಧ್ರಪ್ರದೇಶ | RFO ಹುದ್ದೆಗಳಿಗೆ ನೇರ ನೇಮಕಾತಿ | 16 ವಿಷಯಗಳು |

8. ಭಾರತ ದೇಶದ ಇತರೇ ರಾಜ್ಯಗಳ ಅರಣ್ಯ ಇಲಾಖೆಯಲ್ಲಿ ACF, RFO ಮತ್ತು DyRFO-cum-Surveyor ವೃಂದಗಳ ನೇರ ನೇಮಕಾತಿಯನ್ನು ಅರಣ್ಯ ಶಾಸ್ತ್ರ (Forestry) ಪದವೀಧರರಿಗೆ ಮಾತ್ರ ಸೀಮಿತಗೊಳಿಸಿರುವುದಿಲ್ಲ.

9. ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಅರಣ್ಯ ಇಲಾಖೆಯಲ್ಲಿ ACF, RFO ಮತ್ತು DyRFO-cum-Surveyor ವೃಂದಗಳ ನೇರ ನೇಮಕಾತಿಯು ಅರಣ್ಯ ಶಾಸ್ತ್ರ (Forestry) ಪದವೀಧರರಿಗೆ ಮಾತ್ರ ಸೀಮಿತಗೊಳಿಸುವುದು ನ್ಯಾಯ ಸಮ್ಮತ ಮತ್ತು ಸಮಂಜಸವಾಗಿರುವುದಿಲ್ಲ ಆದ್ದರಿಂದ ರಾಜ್ಯದಲ್ಲಿ ಅರಣ್ಯ ಇಲಾಖೆಯಲ್ಲಿ ACF, RFO ಮತ್ತು DyRFO-cum-Surveyor ವೃಂದಗಳಲ್ಲಿನ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್‌ಇಇ 72 ಎಫ್‌ಇಜಿ 2017, ದಿನಾಂಕ:28.02.2022ರಲ್ಲಿ ಅಧಿಸೂಚಿಸಿದ ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2018ನ್ನು ತಿದ್ದುಪಡಿ ಮಾಡುವುದು ಸೂಕ್ತವಾಗಿರುವುದಿಲ್ಲ.

ಸಂಖ್ಯೆ: ಎಫ್‌ಇಇ **34** ಎಫ್‌ಇಜಿ **2024** (ಇ)

(ಈಶ್ವರ ಬಿ. ಖಂಡ್ರೆ)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು



Generated from eOffice by MANOHARA V.G, FEE-SRASST(MVG)_EST, SENIOR ASSISTANT, FOREST DEPARTMENT SEC on 21/03/2024 05:17 PM